ಕಡೆ ವರ್ಗಾಯಿಸಬೇಕೆಂದು ಪ್ರಸ್ತಾವನೆ ಇದೆಯೆಂದು ಗಮನಕ್ಕೆ ಬಂದಿದೆ. ಅದು ನಿಜವಾ? ಮತ್ತು ಹೊಸದಾಗಿ ಶಾಲಾ ಮಕ್ಕಳಿಗಾಗಿ ಸಂಚಾರಿ ಗ್ರಂಥಾಲಯಗಳನ್ನು ಕೊಳೆಗೇರಿಗಳ ಶಾಲೆಗಳಿಗೆ ಕೊಡಲು ಯೋಜನೆ ಏನಾದರೂ ಹಾಕಿಕೊಂಡಿದ್ದೀರಾ? ದಯವಿಟ್ಟು ತಿಳಿಸಬೇಕು.

ಶ್ರೀ ಬಾಬುರಾವ್ ಚವಾಣ್: ಮಾನ್ಯ ಅಧ್ಯಕ್ಷರೇ, ಮಕ್ಕಳ ಗ್ರಂಥಾಲಯ ಆರಂಭಿಸಲು ಒಳ್ಳೆಯ ನಿವೇಶನಕ್ಕಾಗಿ ನಾವು ಹುಡುಕುತ್ತಾ ಇದ್ದೇವೆ. ನಿವೇಶನ ಇನ್ನೂ ಸಿಕ್ಕಿಲ್ಲ. ಒಂದು ವೇಳೆ ಬೆಂಗಳೂರು ಮಹಾನಗರಪಾಲಿಕೆ ಒಳ್ಳೆಯ ನಿವೇಶನ ನಮಗೆ ಕೊಟ್ಟರೆ ನಮ್ಮ ದುಡ್ಡಿನಿಂದ ಒಂದು ಒಳ್ಳೆಯ ಮಕ್ಕಳ ಗ್ರಂಥಾಲಯ ಕಟ್ಟಬೇಕೆಂದು ಸರ್ಕಾರಕ್ಕೆ ಇಚ್ಛೆ ಇದೆ. ಅದರ ಜೊತೆಯಲ್ಲಿ ಮಹಾನಗರಪಾಲಿಕೆಯ ಪ್ರತಿ ವಾರ್ಡ್‌ಗೆ ಒಂದು ಗ್ರಂಥಾಲಯ ಕೊಡಬೇಕೆಂದು ನಿಯಮ ಕೂಡ ಮಾಡಿದ್ದೇವೆ. ಅಲ್ಲಿನ Corporators ಹಾಗೂ ಶಾಸಕರು ನಮಗೆ cooperate ಮಾಡಿ ಕೊಟ್ಟರೆ ಮಹಾನಗರಪಾಲಿಕೆ ಎಲ್ಲಿದೆ ಅಲ್ಲಿನ ಪ್ರತಿ ವಾರ್ಡಿನಲ್ಲಿ ಮತ್ತು ಕೊಳಚೆ ಪ್ರದೇಶ ಏನಿದೆ ಅಲ್ಲೂ ನಮಗೆ ಸ್ಥಳಾವಕಾಶ ಮಾಡಿಕೊಟ್ಟರೆ ಗ್ರಂಥಾಲಯ ತೆರೆಯಲು ಸರ್ಕಾರ ಸಿದ್ಧವಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಇಡೀ ಬೆಂಗಳೂರಿನಲ್ಲಿ 53 ಗ್ರಂಥಾಲಯಗಳಿವೆ ಎಂದು ಕೊಟ್ಟಿದ್ದೀರಿ, ಇಡೀ ರಾಜ್ಯದಲ್ಲಿ ಎಷ್ಟು ಗ್ರಂಥಾಲಯಗಳಿವೆ? ಬೆಂಗಳೂರಿಗೆ ಎಷ್ಟು ಕೊಟ್ಟಿದ್ದೀರಿ? ಇಡೀ ರಾಜ್ಯದಲ್ಲಿ ಎಷ್ಟು ಖರ್ಚು ಮಾಡಿದ್ದೀರಿ, ಬೆಂಗಳೂರಿಗೆ ಎಷ್ಟು ಖರ್ಚು ಮಾಡಿದ್ದೀರಿ? ಹಾಗೆಯೇ ಕನ್ನಡ ಮತ್ತು ಇಂಗ್ಲಿಷ್ ಪುಸ್ತಕಗಳೆಷ್ಟು ಖರೀದಿ ಮಾಡಿದ್ದೀರಿ? ಏಕೆಂದರೆ ಏನಾದರೂ ತಾರತಮ್ಯ ಆಗಿದೆಯಾ ಅಂತ ಕೇಳಬೇಕಲ್ಲ?

ಶ್ರೀ ಬಾಬುರಾವ್ ಚವಾಣ್: ಸದಸ್ಯರು ಕೇಳುವ ಪ್ರಶ್ನೆಗಳ ವಿವರ ನನ್ನ ಬಳಿ ಇಲ್ಲ. ಅದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಲಿ.

ಅಧ್ಯಕ್ಷರು: ಖರೀದಿಸಿದ್ದರಲ್ಲಿ ಕನ್ನಡ ಎಷ್ಟು ಇಂಗ್ಲಿಷ್ ಎಷ್ಟು ಅಂತ ಕೇಳುತ್ತಿದ್ದಾರೆ.

ಶ್ರೀ ಬಾಬುರಾವ್ ಚವಾಣ್: ಒಟ್ಟು budgetನಲ್ಲಿ 80% ಕನ್ನಡ ಪುಸ್ತಕ ಖರೀದಿ ಮಾಡುತ್ತೇವೆ. 20% ಇಂಗ್ಲಿಷ್ ಉರ್ದು ಮರಾಠಿ ಪುಸ್ತಕಗಳಿಗೆ ಖರ್ಚು ಮಾಡುತ್ತೇವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಲಾವಿದರಿಗೆ ನೀಡಲಾಗುವ ಮಾಸಾಶನ

448 (3511) ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಡಿನ ಕಲೆ ಹಾಗೂ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಲಾವಿದರಿಗೆ ನೀಡುವ ಮಾಸಾಶನ ಮೊತ್ತವನ್ನು ಹೆಚ್ಚಿಸುವ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ; ಹಾಗಿದ್ದಲ್ಲಿ ಅದರ ವಿವರಗಳೇನು;

ಆ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಎಷ್ಟು ಜನ ಕಲಾವಿದರು ಇಲಾಖಾ ಮಾಸಾಶನವನ್ನು ಪಡೆಯುತ್ತಿದ್ದಾರೆ; ವಿವರಗಳನ್ನು ಒದಗಿಸಿ;

ಇ) ಬೆಳ್ತಂಗಡಿ ತಾಲ್ಲೂಕಿನ ಎಷ್ಟು ಜನ ಕಲಾವಿದರು ಮಾಸಾಶನ ಕೋರಿ ಅರ್ಜಿ ಸಲ್ಲಿಸಿದ್ದಾರೆ, ಅವರಲ್ಲಿ ಎಷ್ಟು ಜನರಿಗೆ ಮಾಸಾಶನ ಮಂಜೂರಾತಿ ಮಾಡಲಾಗಿದೆ; ಉಳಿದವರಿಗೆ ಯಾವಾಗ ಮಾಡಲಾಗುವುದು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು):

ಅ) 1.11.2002 ರಿಂದ ಅನ್ವಯವಾಗುವಂತೆ ಮಾಸಿಕ ರೂ. 250 ರಿಂದ ರೂ. 500 ರವರೆಗೆ ಹೆಚ್ಚಿಸಿದೆ.

ಈಗ ಪುನಃ ಹೆಚ್ಚಿಸುವ ಪ್ರಸ್ತಾಪ ಇರುವುದಿಲ್ಲ.

ಆ) 4 ಕಲಾವಿದರು

1. ಶ್ರೀ ಕಾಂತಪ್ಪಗೌಡ, ಇಂಡಬಿಟಿ ವಿಲೇಜ್, ಬೆಳ್ತಂಗಡಿ ತಾ: ದ.ಕ. ಜಿಲ್ಲೆ–ನಾಟಕ ಕ್ಷೇತ್ರ.
2. ಶ್ರೀ ಬಿ. ನಾರಾಯಣಸುವರ್ಣ, ಬೊಲಾಲ, ಬೆಳ್ತಂಗಡಿ ತಾ: ದ.ಕ. ಜಿಲ್ಲೆ – ಸಂಗೀತ ಕ್ಷೇತ್ರ
3. ಶ್ರೀ ಟಿ.ಎಲ್. ವಾಸುದೇವರಾವ್ ವಾದಂಕಿ, ಬೆಳ್ತಂಗಡಿ ತಾ: ದ.ಕ. ಜಿಲ್ಲೆ–ಸಂಗೀತ ಕ್ಷೇತ್ರ.
4. ಶ್ರೀ ನಾರಾಯಣ ಅನಂತ ತಮಾನಕರ್, ಮುಂಡಜ್ಜಿ ಅಂಚೆ, ಬೆಳ್ತಂಗಡಿ ತಾ: ದ.ಕ. ಜಿಲ್ಲೆ – ಸಂಗೀತ ಕ್ಷೇತ್ರ.

ಇ) 1. ಇದುವರೆಗೆ ಒಟ್ಟು 6 ಜನ ಕಲಾವಿದರು.

2. 4 ಜನರಿಗೆ ಈಗಾಗಲೇ ಮಾಸಾಶನ ಮಂಜೂರು ಮಾಡಿದೆ.
3. ಇಬ್ಬರಿಗೆ ರೂ 500–00 ರಂತೆ ಮಾಸಿಕ ಮಾಸಾಶನ ಮಂಜೂರು ಮಾಡಲು ಪ್ರಸ್ತಾವನೆ ಬಂದಿದ್ದು ಪರಿಶೀಲನೆಯಲ್ಲಿದೆ.

ಶ್ರೀ ಕೆ. ಪ್ರಭಾಕರ ಬಂಗೇರ: ಮಾನ್ಯ ಅಧ್ಯಕ್ಷರೇ, ಸಚಿವರು ಉತ್ತರದಲ್ಲಿ 6 ಜನಕ್ಕೆ ಮಾಸಾಶನ ಮಂಜೂರು ಮಾಡುವ ಪ್ರಸ್ತಾವನೆ ಇದೆ ಎಂದಿದ್ದರೆ. ಆ 6 ಜನ ಯಾರು ಎಂಬುದನ್ನು ತಿಳಿಸಬೇಕೆಂದು ವಿನಂತಿ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ಪ್ರಸ್ತಾವನೆ ಇದೆ ಎಂದು ನಾನು ಹೇಳಲಿಲ್ಲ, 250 ಇದ್ದುದನ್ನು 1–11–2002 ರಿಂದ ಅನ್ವಯವಾಗುವಂತೆ 250 ರಿಂದ 500 ರೂ.ಗಳಿಗೆ ಮಾಸಾಶನ ಹೆಚ್ಚಿಸಲಾಗಿದೆ. ನೀವು ಕೇಳಿರುವ ಮಾಹಿತಿ ಪ್ರಕಾರ ನಿಮ್ಮಲ್ಲಿ 4 ಜನಕ್ಕೆ ಕೊಡುವ ಮಾಹಿತಿ ನಾವು ಕೊಟ್ಟಿದ್ದೇವೆ. ಬೆಳ್ತಂಗಡಿ ತಾಲೂಕಿನಲ್ಲಿ 6 ಕಲಾವಿದರು ಅರ್ಜಿ ಸಲ್ಲಿಸಿದವರ ಪೈಕಿ 4 ಜನರಿಗೆ ಕೊಟ್ಟಿರುವುದನ್ನು ಹೇಳಿದ್ದೇನೆ. ಇನ್ನಿಬ್ಬರಿಗೆ 500 ರೂಪಾಯಿ ಮಾಸಾಶನ ಮಂಜೂರು ಮಾಡಲು ಪ್ರಸ್ತಾವನೆ ಬಂದಿದ್ದು ಪರಿಶೀಲನೆಯಲ್ಲಿದೆ. ಅದನ್ನು ತಮಗೆ ಆಮೇಲೆ ತಿಳಿಸಿಕೊಡುತ್ತೇನೆ.

ಶ್ರೀ ಕೆ. ಪ್ರಭಾಕರ ಬಂಗೇರಾ: ಮುತ್ತುಗೌಡ, ಸುಂದರಾಚಾರಿ ಮತ್ತು ಶ್ರೀನಿವಾಸಾಚಾರ್ಯ ಇವರೂ ಅರ್ಜಿ ಸಲ್ಲಿಸಿದ್ದಾರೆ. ಅವರಿಗೂ ಮಾಸಾಶನ ಮಂಜೂರು ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ಅರ್ಜಿ ಬಂದಿರುತ್ತವೆ, ಆದರೆ ನಿಯಮಾವಳಿಗಳ ವ್ಯಾಪ್ತಿಯೊಳಗೆ ಅವು ಬಂದರೆ ಆದ್ಯತೆ ಮೇಲೆ ನಾವು ಪರಿಗಣಿಸುತ್ತೇವೆ. ತಮ್ಮ ಅರ್ಜಿದಾರರೂ ಆ ವ್ಯಾಪ್ತಿಯೊಳಗೆ ಬಂದರೆ ಖಂಡಿತ ಅವನ್ನು ಪರಿಶೀಲಿಸಿ, ಪಡೆಯುವ ಹಕ್ಕನ್ನು ಅವರು ಹೊಂದಿರುತ್ತಾರೆ.

ಶ್ರೀ ಕೆ. ಪ್ರಭಾಕರ ಬಂಗೇರಾ: ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿಗೆ ಯಾವುದಾದರೂ ಒಂದು ಕಾರ್ಯಕ್ರಮ ಹಾಕಿಕೊಳ್ಳುವಂತಹ ಯೋಜನೆ ಸರ್ಕಾರದ ಮುಂದಿದೆಯೇ? ಅದನ್ನು ತಿಳಿಸಬೇಕೆಂದು ವಿನಂತಿಸುತ್ತೇನೆ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ತಮ್ಮ ಪ್ರಶ್ನೆ ಏನು ಎಂಬುದು ನನಗೆ ಅರ್ಥವಾಗಲಿಲ್ಲ.

ಶ್ರೀ ಕೆ. ಪ್ರಭಾಕರ ಬಂಗೇರಾ: ಮಾನ್ಯ ಅಧ್ಯಕ್ಷರೇ, ಇಲಾಖೆಯ ವತಿಯಿಂದ ನಮ್ಮ ರಾಜ್ಯದಲ್ಲಿರಬಹುದು, ಅಥವಾ ಜಿಲ್ಲೆಯಲ್ಲಿರಬಹುದು, ತಾಲ್ಲೂಕಿನಲ್ಲೂ ಕೂಡ ಅದಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳತಕ್ಕ ಯೋಜನೆ ತಮ್ಮ ಇಲಾಖೆಯ ಮೂಲಕ ಇದೆಯೇ ಎಂದು ತಿಳಿಯುವುದಕ್ಕೆ ಬಯಸುತ್ತೇನೆ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಒಳಗೆ, ಹೊರ ಗಡಿ ಭಾಗಗಳಲ್ಲಿ, ಗಡಿನಾಡು ಉತ್ಸವಗಳನ್ನು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮತ್ತು ಬಯಲು ರಂಗಮಂದಿರಗಳನ್ನು ಕಟ್ಟಿಸುವಂಥದ್ದು, ಕೊಡುವಂಥದ್ದು, ಆ ರೀತಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೊಡುವಂಥ ಅವಕಾಶ ನಮ್ಮಲ್ಲಿದೆ. ತಾವು ಪ್ರಸ್ತಾವನೆಯನ್ನು ಸಲ್ಲಿಸಿದರೆ ಖಂಡಿತ ಅದನ್ನು ಪರಿಶೀಲಿಸಿ ನಾವು ಅದಕ್ಕೆ ಅನುವು ಮಾಡಿಕೊಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಈ ಮಾಸಾಶನವನ್ನು ಮಂಜೂರು ಮಾಡುವುದಕ್ಕೆ ಯಾವ ಮಾನದಂಡವನ್ನು ಇಟ್ಟುಕೊಂಡಿದ್ದೀರಿ? ಎಂಥ ಕಲಾವಿದರಿಗೆ ಅದನ್ನು ಮಂಜೂರು ಮಾಡುತ್ತೀರಿ? ಆ ನಂತರ ವಯಸ್ಸಿನ ಮಿತಿಯೆಷ್ಟು ಹಾಕಿದ್ದೀರಿ? ಒಂದು ವೇಳೆ ವಯಸ್ಸಿನ ಮಿತಿಗಿಂತ ಕಡಿಮೆ ವಯಸ್ಸಿನವರು ಇದ್ದರೆ ಅವರು ಯಾವುದೇ ರೋಗದಿಂದ ಪೆರಾಲಿಸಿಸ್ ವಗೈರೆಯಾಗಿ ಅಶಕ್ತರಾಗಿಬಿಟ್ಟಿರುತ್ತಾರೆ. ಅಂಥವರಿಗೆ ಇಷ್ಟು ವಯಸ್ಸಾಗಿಲ್ಲವೆಂದು ಹೇಳಿ ತಿರಸ್ಕಾರ ಮಾಡುತ್ತಿದ್ದೀರಿ. ಅದನ್ನು ಏನಾದರೂ ಕನ್‌ಸಿಡರ್ ಮಾಡುತ್ತೀರಾ? ದುಡಿಯಲಿಕ್ಕೆ ಅಸಮರ್ಥರಾದ ಕಲಾವಿದರಿಗೆ ಏನಾದರೂ ಕನ್‌ಸಿಡರ್ ಮಾಡುತ್ತೀರಾ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ನಾನು ಕೇಳಬಯಸುತ್ತೇನೆ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೆ, ನಾವು ಮಾಸಾಶನವನ್ನು ಕೊಡುವುದಕ್ಕೆ ಒಂದು ವಯಸ್ಸಿನ ಮಾನದಂಡ ಮತ್ತು ಅವರ ವಾರ್ಷಿಕ ಆದಾಯವನ್ನು ಮಾನದಂಡವಾಗಿ ಇಟ್ಟುಕೊಂಡು ಅದನ್ನು ಪರಿಶೀಲನೆ ಮಾಡುತ್ತೇವೆ ಮತ್ತು ಹೆಚ್ಚಾಗಿ ಅವರು ಸ್ಥಳೀಯರಿಂದ ಅವರು ಕಲಾವಿದರು ಎನ್ನುವಂಥದ್ದು ಗುರುತಿಸಿಕೊಳ್ಳಬೇಕು. ಅವರುಗಳು ಅರ್ಜಿ ಸಲ್ಲಿಸುತ್ತಿರುತ್ತಾರೆ. ಆದರೆ ಸ್ಥಳೀಯರು ಮತ್ತೆ ಅಲ್ಲಿ ತಹಶೀಲ್ದಾರ್‌ರವರು ಮತ್ತು ಇತರ ಕಲಾವಿದರು ಅವರನ್ನು ಗುರುತಿಸತಕ್ಕಂಥ ಮಾನದಂಡದಿಂದ ಮತ್ತು ಅವರ ವಯೋಮಿತಿ ಮತ್ತು ಆದಾಯ ಮಿತಿಯನ್ನು ಪರಿಶೀಲನೆ ಮಾಡಿ ಅದರ ಪ್ರಸ್ತಾವನೆ ಬಂದ ನಂತರ ಕ್ರಮ ಕೈಗೊಳ್ಳುತ್ತೇವೆ. ಇಲ್ಲಿ ಸಮಿತಿಯ ಅಧ್ಯಕ್ಷರು ಈಗ ಸಧ್ಯಕ್ಕೆ ಮಾಸ್ಟರ್ ಹಿರಣ್ಣಯ್ಯ ಅವರಿದ್ದಾರೆ. ಅವರ ಅವಧಿ ಮುಗಿಯುತ್ತಾ ಇದೆ. ಹೀಗೆ ಆ ಸಮಿತಿ ಪ್ರಕ್ರಿಯೆಯಲ್ಲಿ ಆಯ್ಕೆಗೊಂಡಂಥವರಿಗೆ ನಾವು ಮಾಸಾಶನವನ್ನು ಕೊಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ವಯಸ್ಸಿನ ಮಿತಿ ಎಷ್ಟು ಮತ್ತು ತಾವು ಆಯ್ಕೆ ಮಾಡುವಾಗ ಶಾಸಕರಿಗೆ ಪ್ರಶಸ್ತ್ಯ ಇಲ್ಲವೆಂದಾಯಿತು. ಶಾಸಕರು ಗುರುತಿಸಿದರೆ ತಾವು ನೋಡುವುದಿಲ್ಲವೆಂದಾಯಿತು. ಅಲ್ಲಿ ಸ್ಥಳೀಯರು ಎಂದು ಹೇಳಿದಿರಿ. ಶಾಸಕರೇನಾದರೂ ಗುರುತಿಸಿ ತಿಳಿಸಿದರೆ ಅದನ್ನು ಮಾಡುತ್ತೀರಾ?

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೆ, 68 ವರ್ಷ ವಯೋಮಿತಿಗಿಂತ ಮೇಲ್ಪಟ್ಟವರಿಗೆ ಮಾತ್ರ ಇದು ಅನ್ವಯವಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಲ್ಲಿ ನಾನು ಕಳೆದ ಕೆಲವು ವರ್ಷಗಳಿಂದ ವಿನಂತಿಸಿಕೊಳ್ಳುತ್ತಿದ್ದೇನೆ. ಈ ಒಂದು ಕಲಾವಿದರಿಗೆ ಅವರಿಗೆ ಮಾಸಾಶನವನ್ನು ಕೊಡುವಾಗ 3600 ರೂ. ಆದಾಯ ಇರಬೇಕು ಎಂದು ಸರ್ಕಾರದ ನಿಬಂಧನೆ ಇದೆ. ಇದು ಹಾಸ್ಯಾಸ್ಪದವಲ್ಲವೇ? ಇವತ್ತು ಸಾಮಾನ್ಯ ಕೂಲಿ ಮಾಡುವವರಿಗೂ ಕೂಡ 3600 ರೂಪಾಯಿಗಿಂತ ಜಾಸ್ತಿ ಆದಾಯ ಬರುತ್ತಿರುವುದನ್ನು ನೋಡುತ್ತೇವೆ. ಹಾಗಾಗಿ ಸರ್ಕಾರ 3600 ರೂಪಾಯಿ ಮಿತಿಯಿಂದ ಅದನ್ನೇನಾದರೂ 18 ಸಾವಿರ ರೂ. ಪಾಯಿಗಳಿಗಾದರೂ ಕನಿಷ್ಟ ಏರಿಸುವಂಥ ಒಂದು ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೋ ಹೇಗೆ? ಅದನ್ನು ಯಾವಾಗ ಅಂತಿಮಗೊಳಿಸುತ್ತೀರಿ? ಇಲ್ಲದಿದ್ದರೆ ಯಾವ ಕಲಾವಿದರಿಗೂ ಈ ಒಂದು ವಾರ್ಷಿಕ ಮಿತಿಯೊಳಗೆ ಬರುವುದಿಲ್ಲವೆಂದು ಹೇಳಿ ಇವರು ಯಾವ ಕಲಾವಿದರನ್ನೂ ಆಯ್ಕೆಯೇ ಮಾಡುವುದಿಲ್ಲ. ಇವರು ಆಯ್ಕೆ ಮಾಡಬಾರದೆಂದು ಹೇಳಿ ಈ ಒಂದು ಕ್ಲಾಜ್ ಅನ್ನು ಇಟ್ಟುಕೊಂಡಿದ್ದಾರೆ. ಇದು ಒಂದು. ಎರಡನೆಯದಾಗಿ, ಇನ್ನು ಮಾಸಾಶನವನ್ನು ಕೊಡುವುದಕ್ಕೆ ಇನ್ನು ಸಾವಿರಾರು ಕಲಾವಿದರುಗಳು ಕಾಯುತ್ತಿದ್ದಾರೆ. ಅವರಿಗೆ ಇದುವರೆಗೂ ಯಾರಿಗೂ ಮಾಸಾಶನವನ್ನು ಕೊಡುತ್ತಿಲ್ಲ. ಹಾಗಾಗಿ ಎಷ್ಟು ಕಲಾವಿದರಿಂದ ಮಾಸಾಶನ ಕೋರಿ ಬಂದಿರುವ ಅರ್ಜಿಗಳು ಪೆಂಡಿಂಗ್ ಇವೆ ಎಂಬುದನ್ನು ಹೇಳಬೇಕು.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೆ, ನಾವು ಖಂಡಿತವಾಗಿಯೂ ಮಾಸಾಶನವನ್ನು ಕೊಡುತ್ತಿರುವಂಥಾದ್ದು ನಾವು ಇದುವರೆಗೂ ಮಂಜೂರು ಮಾಡಿರತಕ್ಕದ್ದು 9800 ಜನ ಕಲಾವಿದರಿಗೆ ನಾವು ಮಾಸಾಶನವನ್ನು ಕೊಡುತ್ತಿದ್ದೇವೆ. ಹೀಗೆ ಪಡೆಯುತ್ತಿರುವವರು 6721 ಕಲಾವಿದರು ಪಡೆಯುತ್ತಿದ್ದಾರೆ. ಮತ್ತು ಈಗ 2003–04ನೇ ಸಾಲಿನಲ್ಲಿ 381 ಮಾಸಾಶನಕ್ಕಾಗಿ ಬಂದಿರುವ ಅರ್ಜಿಗಳು. ಅದನ್ನು ಪರಿಶೀಲನೆ ಮಾಡಿ ಪ್ರಕ್ರಿಯೆಯಲ್ಲಿ ಅದನ್ನು ಕೈಗೆ ತೆಗೆದುಕೊಳ್ಳುತ್ತೇವೆ. 3600 ರೂಪಾಯಿ ನಾವು ಆದಾಯವಾಗಿ ಮಾನದಂಡವನ್ನಾಗಿಟ್ಟುಕೊಂಡಿರುತ್ತೇವೆ.

ರಾಜ್ಯದಲ್ಲಿ ಹೊಸ ಸರ್ಕಾರಿ ಹೋಮಿಯೋಪತಿ ಆಸ್ಪತ್ರೆಗಳನ್ನು ತೆರೆಯುವುದು

449 (3488) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಹೊಸ ಹೋಮಿಯೋಪತಿ ಆಸ್ಪತ್ರೆಗಳನ್ನು ತೆರೆಯಬೇಕೆಂದು ಉದ್ದೇಶಿಸಲಾಗಿದೆ;